2000 ರಿಂದ 2002 ರ ವರೆಗೆ ರಾಜ್ಯ ಸರ್ಕಾರ ವಿಶ್ವಬ್ಯಾಂಕ್‌ನಿಂದ ಪಡೆದಿರುವ ಸಾಲ

322(714) - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000 ದಿಂದ 2002 ರವರೆಗೆ ರಾಜ್ಯ ಸರ್ಕಾರ ವಿಶ್ವಬ್ಯಾಂಕ್‌ನಿಂದ ಪಡೆದಿರುವ ಸಾಲದ ಮೊತ್ತ ಹಾಗೂ ಬಡ್ಡಿದರ ಎಷ್ಟು?

ಆ) ಸದರಿ ಸಾಲವನ್ನು ಯಾವ ಇಲಾಖೆಗಳಿಗೆ ಬಳಸಲಾಗಿದೆ. ಇಲ್ಲಿಯವರೆಗೆ ಖರ್ಚಾದ ಹಣ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ವಿಶ್ವಬ್ಯಾಂಕ್ ನೆರವಿನಿಂದ ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಯೋಜನೆಗಳಿಗೆ ರಾಜ್ಯ ಸರ್ಕಾರವು 2000-2001 ಮತ್ತು 2001-2002 ರಲ್ಲಿ ರೂ. 1483.25 ಕೋಟಿ ಪಡೆದಿರುತ್ತದೆ. ಪ್ರಸ್ತುತ ವರ್ಷ ಬಡ್ಡಿ ದರವು ಶೇಕಡಾ 11.5 ರಷ್ಟಿದೆ.

ಆ) ಈ ಸಾಲವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಲಸಂಪನ್ಮೂಲ ಇಲಾಖೆ. ಲೋಕೋಪಯೋಗಿ ಇಲಾಖೆ, ಆರ್ಥಿಕ ಇಲಾಖೆ, ಲೋಕೋಪಯೋಗಿ ಇಲಾಖೆ. ಆರ್ಥಿಕ ಇಲಾಖೆ. ಇಂಧನ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು 2000-2001 ಮತ್ತು 2001-2002 ರಲ್ಲಿ ಬಳಸಿಕೊಂಡಿರುತ್ತದೆ. ಇಲ್ಲಿಯವರೆಗೆ ರೂ. 1586.19 ಕೋಟಿಗಳು ಖರ್ಚಾಗಿರುತ್ತದೆ.

ಹುಬ್ಬಳ್ಳಿ - ಧಾರವಾಡ ಜಿಲ್ಲೆಯಲ್ಲಿ ಕೆರೆಗಳ ಹೊಳೆತ್ತುವ ಕೆಲಸ

325(258) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೆರೆಗಳು ಹೊಳೆತ್ತುವ ಯೋಜನೆಯನ್ನು ಅಳವಡಿಸಿ ಕೊಂಡಿವೆ; (ಕ್ಷೇತ್ರವಾರು ವಿವರ ನೀಡುವುದು)

ಆ) ಹುಬ್ಬಳ್ಳಿ ಮತಕ್ಷೇತ್ರದಲ್ಲಿ ಎರಡು ಕೆರೆಗಳ ಹೊಳೆತ್ತುವ ಕೆಲಸಕ್ಕೆ ಮನವಿ ಮಾಡಿಕೊಂಡಿದ್ದು, ಆದರೆ ಈವರೆಗೂ ಈ ಕೆಲಸ ಕೈಗೆತ್ತಿಕೊಳ್ಳದಿರಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಯ ಮತಕ್ಷೇತ್ರವಾರು ಈ ಕೆಳಗೆ ನಮೂದಿಸಿರುವ 7 ಕೆರೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕ್ರ.ಸಂ.	ಮತಕ್ಷೇತ್ರ ಹೆಸರು	ಕೆರೆಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ
1.	ಧಾರವಾಡ(ಯು)	ನವಲೂರು ಕೆರೆ	9.00
2.	ಧಾರವಾಡ	ಡೋರ್ಲ ಕೆರೆ	40.00
3.	ಕಲಘಟಗಿ	ಸಂಗಮೇಶ್ವರ ಕೆರೆ	40.00
4.	ಹುಬ್ಬಳ್ಳಿ (ಯು)	ಬುದ್ನಾಳ ಕೆರೆ	40.00
5.	ಹುಬ್ಬಳ್ಳಿ (ಆರ್)	ಅರಳೀಕಟ್ಟೆ ಕೆರೆ	15.50
6.	ಕುಂದಗೋಳ	ಗೌಡಗೇರಿ ಕೆರೆ	27.50
7.	ನವಲಗುಂದ	ಬೊಕ್ಕಾಪುರ ಕೆರೆ	25.00

ಆ) ಹುಬ್ಬಳ್ಳಿ ಮತಕ್ಷೇತ್ರದಲ್ಲಿ ಶಾಸಕರ ಮನವಿಯ ಪ್ರಕಾರ ಮತಕ್ಷೇತ್ರವಾರು ಬುದ್ನಾಳ ಕೆರೆ ಹಾಗೂ ಅರಳೀಕಟ್ಟೆ ಕೆರೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಾಮಗಾರಿಗಳ ಅಂದಾಜುಗಳು ಪರಿಶೀಲನಾ ಹಂತದಲ್ಲಿರುವುದರಿಂದ ಇನ್ನೂ ಕಾಮಗಾರಿಗಳನ್ನು ಪ್ರಾರಂಭಿಸಲಾಗಿಲ್ಲ.

10ನೇ ಹಣಕಾಸು ಯೋಜನೆಯಡಿ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಗೆ ಆರ್ಥಿಕ ಅನುದಾನ

327(349) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 10ನೇ ಹಣಕಾಸು ಯೋಜನೆಯಡಿಯಲ್ಲಿ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಗೆ ನೀಡಿದ ಆರ್ಥಿಕ ಅನುದಾನವೆಷ್ಟು?

ಆ) ಯಾವ ಯಾವ ಕೆಲಸಕ್ಕೆ ಆರ್ಥಿಕ ಅನುದಾನ ನೀಡಲಾಗಿದೆ.

ಇ) ಇಲ್ಲವಾದಲ್ಲಿ ಕಾರಣವೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ರೂ. 1,87,25,000-00

ಆ) ಈ ಕೆಳಗೆ ಕಾಣಿಸಿದ ಕೆಲಸಗಳಿಗೆ ಅನುದಾನವನ್ನು ನೀಡಲಾಗಿದೆ.

1. ರಸ್ತೆಗಳ ಪುನರ್ ನಿರ್ಮಾಣ ಹಾಗೂ ರಿಪೇರಿ: ಸುಧಾರಣೆ
2. ಶಾಲೆ: ಆಸ್ಪತ್ರೆ ಹಾಗೂ ಮಾರುಕಟ್ಟೆಗಳ ಕಟ್ಟಡಗಳ ನಿರ್ಮಾಣ: ರಿಪೇರಿ
3. ಬೀದಿ ದೀಪಗಳು
4. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್
5. ಖಾಲಿ ಜಾಗಗಳು ಹಾಗೂ ಒದಗಿಸಿದ ಸೌಲಭ್ಯ